
DH
DECCAN HERALD
Sunday August 5, 2018
www.deccanherald.com



Stok
gra
as E
bea
by 3
Page 1

CENTRAL LIBRARY



RDL Technologies Pvt Ltd CEO Raghavendra G Shetty explains about VL glass for visually challenged.

# Seamless indoor navigator for visually challenged developed

**MANGALURU, DHNS:** RDL Visible Light Communication and Research Centre at Sahyadri Innovation Hub at Sahyadri Institute of Engineering and Management has developed VL glass for visually challenged.

RDL Technologies Pvt Ltd CEO Raghavendra G Shetty said that it is a seamless indoor navigator and a visually challenged person can navigate around obstacles avoiding mishaps and dangerous objects. It enables the individual to move around with confidence and independence allowing a person to retain his self-respect. Also called Versatile Personal Mobility Assistant, it enables the individual to move around with confidence. To enable the visually challenged to move around freely within indoor environments like home or office or any unfamiliar spaces, RDL has invented a product by using visible light communication.


On the new innovation, he said it is a pair of spectacles and a frame. In the frame between the glasses, there is a bridge on which a sensor is implanted. This sensor is a VIRL (Visible Light Infrared Receiver) which receives the signals through visible light communication. On the frames connecting the glasses to the earlobe, there are vibrators on both sides. At the end of the frames, speakers are connected which act as earphones. On the frames connecting the earlobes, there is a battery on the left frame and a navigator on the right frame. When the person walks under the LED lights which are strategically fixed on the roof of the room, the sensor scans the indoor environment and sends the signal through the vibrator who wears the glasses and passes instructions through the speaker which are placed at the end of the frame which fits in the ears of the person. As the person walks under the light cones, the visible light communication enables the communications through the sensor.

It has 3 D positioning system to find one's location. If manufactured in bulk, then the glass will be available at reasonable price, he said.

He said that real-time activity monitoring and alerting system embedded in the technology is one of the advantages. In case of any difficulty faced by the person in a room, it immediately alerts the person concerned to take action by rushing in or availing quick help, he added.

**DH News Service**

SUNDAY TIMES OF INDIA
Bennett Coleman & Co. Ltd
HAPPY FRIENDSHIP DAY
AUGUST 5, 2018 | PAGES 26 | INCLUDING TIMESLIFE! | TIMESOFINDIA.COM | EPAPER.TIMESOFINDIA.COM
MANGALURU



**No Relief For Salman**
Will need court's nod to travel abroad 14

**CJI Tells Students**
Don't get swayed by infighting 13



**England Roar Back**
Kohli's efforts go in vain as India lose 1st Test by 31 runs 21

**Startup programme:** Elevate 100 organized by K-Tech, Karnataka, was held in the Sahyadri Campus for the Mangaluru and Udupi regions recently. A total 12 teams participated in the selection process. Elevate 100 aims to provide a comprehensive entrepreneurship platform for startups.

ಮಂಗಳೂರು
ಭಾನುವಾರ
5 ಆಗಸ್ಟ್ 2018
ವಿಲಂಬಿ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ ನಕ್ಷತ್ರ: ಭರಣಿ
ಬೆಲೆ ₹ 5.00

# ಹೊಸ ದಿಗ



ಮೊಘಲ್ ಸರಾಯ್ ಜಂಕ್ಷನ್‌ಗೆ ದೀನದಯಾಳ್ ಹೆಸರು: ಇಂದು ಮರುನಾಮಕರಣ 9



ಕೊಹ್ಲಿ ಹೋರಾಟ ವ್ಯರ್ಥ: ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ಟೆಸ್ಟ್ ಸೋಲು ▶11



ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿ... ಸಿಂಧು ಫೈನಲ್‌ಗೆ

ಸಂಪುಟ 40, ಸಂಚಿಕೆ 140, ಪುಟಗಳು 12+4+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2018-20 Posted at

## ಡಿಸಿಸಿ ಬ್ಯಾಂಕ್‌ನಿಂದ ಮೊಳಹಳ್ಳಿ ಶಿವರಾವ್ ಸಂಸ್ಮರಣೆ

# ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಿಗಂತ ವರದಿ : ಮಂಗಳೂರು, ಆ.24



ದಿಗಂತ ಚಿತ್ರ

ಮೊಳಹಳ್ಳಿ ಶಿವರಾವ್ ಅವರ 138ನೇ ಜನ್ಮದಿನದ ಸ್ಮರಣಾರ್ಥವಾಗಿ ದಕ್ಷಿಣ ಕನ್ನಡ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಶನಿವಾರ ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಬ್ಯಾಂಕಿನ ಸಿಬ್ಬಂದಿಗಳ ಮಕ್ಕಳ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ, ನವೋದಯ ಸ್ವಸಹಾಯ ಸಂಘಗಳ ಪ್ರೇರಕರ ಮಕ್ಕಳಿಗೆ ಪ್ರೋತ್ಸಾಹ ಧನವನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಹ್ಯಾದ್ರಿ ತಾಂತ್ರಿಕ ಮಹಾ ವಿದ್ಯಾಲಯದ ಚೆಯರ್‌ಮನ್ ಡಾ.ಮಂಜುನಾಥ ಭಂಡಾರಿ ಮಾತನಾಡಿ, ಮೊಳಹಳ್ಳಿ ಶಿವರಾವ್ ಭಾರತದ ಸಹಕಾರಿ ಪಿತಾಮಹ. ಅವರು ಸ್ಥಾಪಿಸಿದ ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಇಂದು ರಾಷ್ಟ್ರ ಮಟ್ಟದಲ್ಲಿ ಗುರುತಿಸಲ್ಪಟ್ಟಿದೆ. ಸಂಸ್ಥೆಯಿಂದ ಸಾವಿರಾರು ಕೃಷಿಕರು, ಸಾರ್ವಜನಿಕರಿಗೆ ಅನುಕೂಲವಾಗಿದೆ ಎಂದರು.

ಪ್ರತಿಭಾವಂತರು ಇಂದು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಣಕ್ಕೆ ಜೋತು ಬೀಳುತ್ತಿದ್ದಾರೆ. ಅದರ ಹೊರತಾಗಿ ನೂರಾರು ಅವಕಾಶಗಳಿವೆ. ಆ ಕಡೆಗೂ ನೋಡುವ ಅಗತ್ಯ ಇದೆ. ಆಡಳಿತ ಸೇವೆಯ ಪರೀಕ್ಷೆಗೆ ಹಾಜರಾಗಿ ಸಾಧನೆ ಮಾಡ ಬಹುದಾಗಿದೆ. ಸಂಶೋಧಕರಾಗ ಬಹುದಾಗಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ ಡಾ।ಭಂಡಾರಿ, ಪುರಸ್ಕಾರವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷ ಡಾ। ಎಂ.ಎನ್. ರಾಜೇಂದ್ರಕುಮಾರ್, ಬ್ಯಾಂಕುಗಳು ಸಾಲ ನೀಡುವುದು, ವಸೂಲು ಮಾಡುವುದು ಮತ್ತು ತಮ್ಮ ಅಭಿವೃದ್ಧಿಯ ಬಗ್ಗೆ ಮಾತ್ರ ಯೋಚಿಸಿದರೆ ಸಾಲದು. ಅವುಗಳು ವಿವಿಧ ಕ್ಷೇತ್ರಗಳ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಮಾಡ ಬೇಕು. ಆಗ ಅದು ಹೆಚ್ಚೆಚ್ಚು ಸಾಧನೆ ಮಾಡಲು ಪ್ರೇರಣೆ ಆಗಬಲ್ಲುದು ಎಂದರು.

ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ಆಡಳಿತ ಸೇವೆ ಮತ್ತು ಇನ್ನಿತರ ಉನ್ನತ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೂ ಬ್ಯಾಂಕು ಪ್ರೋತ್ಸಾಹ ನೀಡಲಿದೆ ಎಂದು ರಾಜೇಂದ್ರ ಕುಮಾರ್ ನುಡಿದರು. ಇದೇ ಸಂದರ್ಭದಲ್ಲಿ ನಿರಾಲಂಭ ಪೂರ್ಣ ಚಕ್ರಾಸನದಲ್ಲಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ಮಾಡಿದ ಪಿತ್ರೋಡಿಯ ತನುಶ್ರೀ ಅವರನ್ನು ಗೌರವಿಸಿ ರೂ.25,000 ನಗದು ಪುರಸ್ಕಾರ ನೀಡಲಾಯಿತು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ವಿನಯ ಕುಮಾರ್ ಸೂರಿಂಜೆ, ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಹರೀಶ್ ಆಚಾರ್, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಸದಾಶಿವ ಉಳ್ಳಾಲ, ವಾದಿರಾಜ ಶೆಟ್ಟಿ, ದೇವಿಪ್ರಸಾದ್ ಶೆಟ್ಟಿ, ಭಾಸ್ಕರ ಕೋಟ್ಯಾನ್, ಎಕ್ಸೈಡ್ ಲೈಫ್ ಇನ್ಶೂರೆನ್ಸ್‌ನ ಮಹಾ ಪ್ರಬಂಧಕ ಗಣೇಶ್ ಎಂ ಮೊದಲಾದವರು ಉಪಸ್ಥಿತರಿದ್ದರು.

ಡಿಸಿಸಿ ಬ್ಯಾಂಕಿನ ನಿರ್ದೇಶಕ ಟಿ.ಜಿ. ರಾಜಾರಾಂ ಭಟ್ ಸ್ವಾಗತಿಸಿದರು. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರವೀಂದ್ರ ಬೋಳಾರ್ ವಂದಿಸಿದರು. ಗೋಪಿನಾಥ್ ಭಟ್ ಕಾರ್ಯಕ್ರಮ ನಿರ್ವಹಿಸಿದರು.

ಭಾನುವಾರ 5.8.2018 epaper.kannadaprabha.in

# ಕನ್ನಡಪ್ರಭ

ನೇರ.ದಿಟ್ಟ.ನಿರಂತರ

CENTRAL LIBRARY



ವಿಶ್ವ ಬ್ಯಾಡ್ಮಿಂಟನ್
ಭಾರತದ ಪಿ.ವಿ.
ಸೆಮಿಫೈನಲ್‌ನಲ್ಲಿ ಸಿಂಧುಗೆ
ಯಮಗುಚಿ ವಿರುದ್ಧ
ಗೆಲುವು. ಇಂದು ಫೈನಲ್
ಕ್ಯಾರೋಲಿನ್ ಮರಿನ್

## ಎಸ್‌ಸಿಡಿಸಿಸಿ ಬ್ಯಾಂಕಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

• **ಕನ್ನಡಪ್ರಭವಾರ್ತೆ** ಮಂಗಳೂರು

ಮೊಳಹಳ್ಳಿ ಶಿವರಾವ್ ಅವರ 138ನೇ ಜನ್ಮದಿನದ ಸ್ಮರಣಾರ್ಥವಾಗಿ ದಕ್ಷಿಣ ಕನ್ನಡ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಶನಿವಾರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಬ್ಯಾಂಕ್ ಸಿಬ್ಬಂದಿ ಮಕ್ಕಳ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ, ನವೋದಯ ಸ್ವಸಹಾಯ ಸಂಘಗಳ ಪ್ರೇರಕರ ಮಕ್ಕಳಿಗೆ ಪ್ರೋತ್ಸಾಹ ಧನ ವಿತರಿಸಲಾಯಿತು.

ಪ್ರತಿಭಾ ಪುರಸ್ಕಾರ ನೆರವೇರಿಸಿ ಮಾತನಾಡಿದ ಸಹ್ಯಾದ್ರಿ ತಾಂತ್ರಿಕ ಮಹಾವಿದ್ಯಾಲಯದ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ, ಪ್ರತಿಭಾವಂತರು ಇಂದು ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣಕ್ಕೆ ಜೋತು ಬೀಳುತ್ತಿದ್ದಾರೆ. ಆದರ ಹೊರತಾಗಿ ನೂರಾರು ಅವಕಾಶಗಳಿವೆ. ಉಳಿದ ಕ್ಷೇತ್ರಗಳತ್ತಲೂ ಗಮನ ಹರಿಸುವಂತೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಬ್ಯಾಂಕ್‌ನ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರ ಕುಮಾರ್, ಬ್ಯಾಂಕುಗಳು ಸಾಲ ನೀಡುವುದು, ವಸೂಲು ಮಾಡುವುದು ಮತ್ತು ತಮ್ಮ ಅಭಿವೃದ್ಧಿಯ ಬಗ್ಗೆ ಮಾತ್ರ ಯೋಚಿಸಿದರೆ ಸಾಲದು. ಅವುಗಳು ವಿವಿಧ ಕ್ಷೇತ್ರಗಳಪ್ರತಿಭೆಗಳನ್ನುಗುರುತಿಸಿಪ್ರೋತ್ಸಾಹಿಸುವ ಕೆಲಸ ಮಾಡ ಬೇಕು. ಮುಂದಿನ ದಿನಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ಆಡಳಿತ ಸೇವೆ ಮತ್ತು ಇನ್ನಿತರ ಉನ್ನತ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೂ ಎಸ್‌ಸಿಡಿಸಿಸಿ ಬ್ಯಾಂಕ್ ಪ್ರೋತ್ಸಾಹ ನೀಡಲಿದೆ ಎಂದು ಹೇಳಿದರು.



KP

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

> **ಪ್ರತಿಭಾವಂತರು ಇಂದು ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣಕ್ಕೆ ಜೋತು ಬೀಳುತ್ತಿದ್ದಾರೆ. ಆದರ ಹೊರತಾಗಿ ನೂರಾರು ಅವಕಾಶಗಳಿವೆ. ಉಳಿದ ಕ್ಷೇತ್ರಗಳತ್ತಲೂ ಗಮನ ಹರಿಸಬೇಕು.**
>
> • **ಡಾ.ಮಂಜುನಾಥ ಭಂಡಾರಿ** ಸಹ್ಯಾದ್ರಿ ತಾಂತ್ರಿಕ ಮಹಾವಿದ್ಯಾಲಯದ ಅಧ್ಯಕ್ಷ

ಈ ಸಂದರ್ಭ ನಿರಾಲಂಭ ಪೂರ್ಣ ಚಕ್ರಾಸನದಲ್ಲಿ ಗೋಲ್ಡನ್ ಬುಕ್ ಆಫ್ ರೆಕಾಡ್‌ರ್‌ನಲ್ಲಿ ದಾಖಲೆ ಮಾಡಿದ ಪಿತ್ರೋಡಿಯ ತನುಶ್ರೀ ಅವರಿಗೆ 25 ಸಾವಿರ ರು. ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ವಿನಯಕುಮಾರ್ ಸೂರಿಂಜೆ, ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಹರೀಶ್ ಆಚಾರ್, ಡಿಸಿಸಿ ಬ್ಯಾಂಕ್ ನಿರ್ದೇಶಕರು, ಕಾರ್ಯನಿರ್ವಾಹಕ ಅಧಿಕಾರಿ ರವೀಂದ್ರ ಬೋಳಾರ್ ಮತ್ತಿತರರು ಇದ್ದರು.

ಭಾನುವಾರ, ಆಗಸ್ಟ್ 5, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 216 | ಪುಟ 18 + 2 + 4 • www.prajavani.net f/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY




ಮುಕ್ತಛಂದ
ದಿಟ್ಟತನದಿಂದ
ಪ್ಯಾರಿಸ್‌ನಲ್ಲಿ
ಹೊಸ ಬದುಕನ್ನು
ಕಟ್ಟಿಕೊಂಡ ಮೇಘಾ
ಮಾಲಗತ್ತಿ ಅವರ
ಯಶೋಗಾಥೆ...

## ಪ್ರತಿಭಾ ಪುರಸ್ಕಾರ, ಸಾಧಕರಿಗೆ ಗೌರವ

ಪ್ರಜಾವಾಣಿ ವಾರ್ತೆ

ಮಂಗಳೂರು: ಮೊಳಹಳ್ಳಿ ಶಿವರಾವ್ ಅವರ 138ನೇ ಜನ್ಮದಿನದ ಸ್ಮರಣಾರ್ಥವಾಗಿ ದಕ್ಷಿಣ ಕನ್ನಡ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಶನಿವಾರ ಪ್ರತಿಭಾ ಪುರಸ್ಕಾರ ನಡೆಯಿತು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ಸಹ್ಯಾದ್ರಿ ತಾಂತ್ರಿಕ ಮಹಾ ವಿದ್ಯಾಲಯದ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಪ್ರತಿಭಾ ಪುರಸ್ಕಾರ ನೆರವೇರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ' ಮೊಳಹಳ್ಳಿ ಶಿವರಾವ್ ಅವರಿಂದಾಗಿ ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ಉತ್ತಮ ಬದಲಾವಣೆಯಾಗಿದೆ. ಈ ಹಿಂದೆ ರೈತರು ಸಾಲ ಪಡೆದುಕೊಳ್ಳುವುದು ಅಷ್ಟೊಂದು ಸುಲಭದ ಮಾತಲ್ಲ. ಈಗ ಎಲ್ಲವೂ ಸುಲಭ, ಸರಳವಾಗಿ ಬಿಟ್ಟಿದೆ. ಮೊಳಹಳ್ಳಿ ಅವರು ಲಕ್ಷಾಂತರ ರೈತರ ಕುಟುಂಬಕ್ಕೆ ದಾರಿ ದೀಪವಾಗಿದ್ದಾರೆ' ಎಂದರು.

ಬ್ಯಾಂಕಿನ ಅಧ್ಯಕ್ಷ ಎಂ.ಎನ್. ರಾಜೇಂದ್ರ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ನಿರಾಲಂಭ ಪೂರ್ಣ ಚಕ್ರಾಸನದಲ್ಲಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ಮಾಡಿದ ಪಿತ್ರೋಡಿಯ ತನುಶ್ರೀ ಅವರನ್ನು ಗೌರವಿಸಿ ₹ 25ಸಾವಿರ ನಗದು ಪುರಸ್ಕಾರ ನೀಡಲಾಯಿತು. ಬ್ಯಾಂಕಿನ ಸಿಬ್ಬಂದಿಯ ಮಕ್ಕಳ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ, ನವೋದಯ ಸ್ವಸಹಾಯ ಸಂಘಗಳ ಪ್ರೇರಕರ ಮಕ್ಕಳಿಗೆ ಪ್ರೋತ್ಸಾಹಧನವನ್ನು ನೀಡಲಾಯಿತು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ವಿನಯಕುಮಾರ್ ಸೂರಿಂಜೆ, ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಹರೀಶ್ ಆಚಾರ್, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಸದಾಶಿವ ಉಳ್ಳಾಲ, ವಾದಿರಾಜ ಶೆಟ್ಟಿ, ದೇವಿಪ್ರಸಾದ್ ಶೆಟ್ಟಿ, ಭಾಸ್ಕರ ಕೋಟ್ಯಾನ್, ಎಕ್ಸೈಡ್ ಲೈಫ್ ಇನ್ಶೂರೆನ್ಸ್‌ನ ಮಹಾ ಪ್ರಬಂಧಕ ಗಣೇಶ್ ಎಂ ಮೊದಲಾದವರು ಉಪಸ್ಥಿತರಿದ್ದರು. ಡಿಸಿಸಿ ಬ್ಯಾಂಕಿನ ನಿರ್ದೇಶಕ ಟಿ.ಜಿ. ರಾಜಾರಾಂ ಭಟ್ ಸ್ವಾಗತಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವೀಂದ್ರ ಬೋಳಾರ್ ವಂದಿಸಿದರು. ಗೋಪಿನಾಥ್ ಭಟ್ ನಿರೂಪಿಸಿದರು.




ದಕ್ಷಿಣ ಕನ್ನಡ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಶನಿವಾರ ಪ್ರತಿಭಾ ಪುರಸ್ಕಾರ ನಡೆಯಿತು. ಪ್ರಜಾವಾಣಿ ಚಿತ್ರ

ಸಂಪುಟ Volume 60 | ಸಂಚಿಕೆ Issue 191 | ಪುಟ Pages 12+4

epaper.samyukthakarnataka.com

ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಕಲಬುರಗಿ Kalaburagi | ದಾವಣಗೆರೆ Davanagere

LIBRARY




ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

samyukthakarnataka

ಎಂಟು ದಶಕದ ನಂಟು

ಇಂದು ಹುಟ್ಟುಹಬ್ಬದ ಸಂಭ್ರಮದಲ್ಲಿರುವ ನಟಿ ಕಾಜೋಲ್ ಅವರ ಅಭಿನಯದ ಹೆಲಿಕಾಪ್ಟರ್ ಈಲಾ ಚಿತ್ರದ ಟ್ರೈಸರ್ ಕೂಡಾ ಭಾನುವಾರ ಬಿಡುಗಡೆಯಾಗುತ್ತಿದೆ...

ಭಾನುವಾರ Sunday | ಆಗಸ್ಟ್ 05-2018 August | ₹ 5-00

ಕುನಾಲ್ ರಾಯ್ ಕಪೂರ್ ಜತೆ ತನ್ನ ನಟನೆಯ ಮಾರುಧಾರ್ ಎಕ್ಸ್‌ಪ್ರೆಸ್ ಚಿತ್ರದ ಪೋಸ್ಟರ್ ಬಿಡುಗಡೆ ವೇಳೆ ಸಂತಸದಲ್ಲಿ ನಾಯಕಿ ನಟಿ ತಾರಾ ಅಲಿಶಾ ಬೆರ್ರಿ...

# ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ನೆರವು: ಭರವಸೆ



**ಸಂ.ಕ ಸಮಾಚಾರ ಮಂಗಳೂರು**

ಅತ್ಯಂತ ಹಿಂದುಳಿದ ಮಕ್ಕಳನ್ನು ಗುರುತಿಸಿ ಸಹಾಯ ಮಾಡುತ್ತಿರುವುದು ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಉತ್ತಮ ಸಮಾಜದ ಬೆಳವಣಿಗೆ ಎಂದು ಡಾ. ಮಂಜುನಾಥ್ ಭಂಡಾರಿ ಹೇಳಿದರು.

ಶನಿವಾರ ದ.ಕ. ಜಿಲ್ಲಾ ಸಹಕಾರಿ ಬ್ಯಾಂಕ್ ವತಿಯಿಂದ ಸಹಕಾರಿ ಪಿತಮಹ ದಿ. ಮೊಳಹಳ್ಳಿ ಶಿವರಾವ್ ಸ್ಮಾರಣಾರ್ಥ ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿ ವೇತನವನ್ನು ವಿತರಿಸಿ ಮಾತನಾಡಿದರು. ಲಕ್ಷಾಂತರ ರೈತ ಕುಟುಂಬಕ್ಕೆ, ವಿದ್ಯಾರ್ಥಿಗಳಿಗೆ ಸಹಕಾರಿಯಾದಂತವರು ಮೊಳಹಳ್ಳಿ ಶಿವರಾವ್ ಅವರು ಬಡವರ ಏಳಿಗೆಗೆ ದುಡಿದು ಇಂದು ಎಲ್ಲರ ಮನಸ್ಸಿನಲ್ಲಿ ಉಳಿದಿದ್ದಾರೆ ಎಂದ ಅವರು ಸಮಾಜದಲ್ಲಿ ನಿಮ್ಮನ್ನು ಯಾವುದಕ್ಕೆ ಗುರುತಿಸುತ್ತಿದೆ ಎಂಬುವುದನ್ನು ಗುರುತಿಸಿ ನೀವು ಬದುಕಬೇಕು ಎಂದರು.

ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಮಾತನಾಡಿ 10 ವರ್ಷಗಳಿಂದ ಪ್ರತಿಭೆಗಳನ್ನು ಹುಡುಕಿ ಅವರಿಗೆ ಸನ್ಮಾನ ಮಾಡಲಾಗುತ್ತಿದೆ ಇದರಿಂದ ಹಿಂದುಳಿದವರಿಗೆ ಮುಂದೆ ಸಾಧನೆ ಮಾಡಲು ಸಹಕಾರಿಯಾಗುವುದು ಎಂದ ಅವರು ಐ.ಎ.ಎಸ್, ಐ.ಪಿ.ಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಎಂದಿಗೂ ನಾನು ಸಹಾಯ ಮಾಡುತ್ತೇನೆ. ನಮ್ಮ ಜಿಲ್ಲೆಯಿಂದ ಐ.ಎ.ಎಸ್, ಐ.ಪಿ.ಎಸ್ ಅಧಿಕಾರಿಗಳು ಬರಬೇಕು ಎಂದರು.

ನಿರಲಾಂಭ ಚಕ್ರಾಸನ ಯೋಗದಲ್ಲಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್ ಮತ್ತು ಗಿನ್ನಿಸ್ ದಾಖಲೆ ಮಾಡಿದ ಬಾಲಕಿ ತನುಶ್ರೀ ಪಿತ್ರೋಡಿ ಅವರಿಗೆ 25 ಸಾವಿರ ಬಹುಮಾನ ನೀಡಿ ಮತ್ತು ಸನ್ಮಾನವನ್ನು ಮಾಡಲಾಯಿತು.

ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಉಪಾಧ್ಯಕ್ಷ ವಿನಯ್ ಕುಮಾರ್ ಸೂರಿಂಜೆ, ಹರೀಶ್ ಆಚಾರ್ಯ, ವಾಜರಾಜ್ ಶೆಟ್ಟಿ ಉಪಸ್ಥಿತರಿದ್ದರು.

Anand
WATER STORAGE TANKS
Made out of
100% VIRGIN
Plastic Granules
200 TO 5000 LITERS CAPACITY
Manufacturers: Anand Polymers
Shivally Industrial Area MANIPAL - 576 104 Phone: 0820 - 2575403
www.anandpolymers.net

ಸಾಪ್ತಾಹಿಕ
ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ರವಿವಾರ, ಆಗಸ್ಟ್ 5, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 12

# ಸಂಶೋಧನೆ, ನಾಗರಿಕ ಸೇವೆಗಳತ್ತ ವಿದ್ಯಾರ್ಥಿಗಳ ಚಿತ್ತವಿರಲಿ

## ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ಸಮಾರಂಭದಲ್ಲಿ ಡಾ। ಮಂಜುನಾಥ ಭಂಡಾರಿ

ಮಂಗಳೂರು, ಆ. 4: ವಿದ್ಯಾರ್ಥಿಗಳು ಎಂಜಿನಿಯರಿಂಗ್, ವೈದ್ಯಕೀಯ ಕ್ಷೇತ್ರಗಳಿಗೆ ಮಾತ್ರ ಒತ್ತು ನೀಡುವುದರೊಂದಿಗೆ ಶಿಕ್ಷಣ, ಸಂಶೋಧನೆ, ನಾಗರಿಕ ಸೇವೆ ಕ್ಷೇತ್ರಗಳತ್ತಲೂ ಹೆಚ್ಚು ಗಮನಹರಿಸಬೇಕು ಎಂದು ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಅಧ್ಯಕ್ಷ ಡಾ। ಮಂಜುನಾಥ ಭಂಡಾರಿ ಅಭಿಪ್ರಾಯಪಟ್ಟರು.


ಡಾ। ಮಂಜುನಾಥ ಭಂಡಾರಿ ಅವರು ವಿದ್ಯಾರ್ಥಿವೇತನ ವಿತರಿಸಿದರು.

ದ.ಕ. ಜಿಲ್ಲಾಕೇಂದ್ರ ಸಹಕಾರಿ ಬ್ಯಾಂಕ್, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು, ದ.ಕ. ಜಿಲ್ಲಾ ಸಹಕಾರಿ ಯೂನಿಯನ್ ಲಿಮಿಟೆಡ್ ಮಂಗಳೂರು ಸಂಯುಕ್ತ ಆಶ್ರಯದಲ್ಲಿ ಸಹಕಾರಿ ಪಿತಾಮಹ ಮೊಳಹಳ್ಳಿ ಶಿವರಾವ್ 138ನೇ ಜನ್ಮ ದಿನಾಚರಣೆ ಅಂಗವಾಗಿ ಶನಿವಾರ ಬ್ಯಾಂಕಿನ ಸಭಾಂಗಣದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿವೇತನ ವಿತರಣಾ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ। ಎಂ.ಎನ್. ರಾಜೇಂದ್ರ ಕುಮಾರ್ ಮಾತನಾಡಿ, ಸಾಲ ನೀಡುವುದು, ವಸೂಲಾತಿ, ಲಾಭ ಮಾಡುವುದಷ್ಟೇ ಬ್ಯಾಂಕಿನ ಉದ್ದೇಶವಾಗಿರಬಾರದು. ಸಮಾಜಕ್ಕೆ ಉತ್ತಮ ಕೊಡುಗೆ ನೀಡುವುದು ಹಾಗೂ ಅಸಕ್ತರ ಪಾಲಿಗೆ ಬೆನ್ನೆಲುಬಾಗಿರುವ ಕೆಲಸವನ್ನು ಮಾಡಬೇಕು. ಈ ನಿಟ್ಟಿನಲ್ಲಿ ಕಳೆದ 10 ವರ್ಷಗಳಿಂದ ಎಸ್‌ಸಿಡಿಸಿಸಿ ಬ್ಯಾಂಕ್ ಪ್ರತಿಭಾ ಪುರಸ್ಕಾರ ಆಯೋಜಿಸುತ್ತಿದೆ ಎಂದರು.

2017–18ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ದ.ಕ., ಉಡುಪಿ ಜಿಲ್ಲೆಗಳ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಬ್ಯಾಂಕಿನ ಸಿಬಂದಿ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನ ವಿತರಿಸಲಾಯಿತು. ಒಟ್ಟು 6 ಲಕ್ಷ ರೂ. ವೆಚ್ಚದ ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿವೇತನ ವಿತರಿಸಲಾಯಿತು. ಗಿನ್ನೆಸ್ ದಾಖಲೆಗೈದ ಯೋಗ ಪ್ರತಿಭೆ ತನುಶ್ರೀಗೆ 25 ಸಾವಿರ ರೂ. ನೀಡಿ ಪುರಸ್ಕರಿಸಲಾಯಿತು. ಎಕ್ಸೈಡ್ ಲೈಫ್ ಇನ್ಶೂರೆನ್ಸ್‌ನಲ್ಲಿ ಸಾಧನೆ ಮಾಡಿದ ಏಜೆಂಟರಿಗೆ ಮ್ಯಾನೇಜರ್ ಗಣೇಶ್ ಬಹುಮಾನ ವಿತರಿಸಿದರು.

ಬ್ಯಾಂಕಿನ ಉಪಾಧ್ಯಕ್ಷ ವಿನಯ ಕುಮಾರ್ ಸೂರಿಂಜೆ, ನಿರ್ದೇಶಕರಾದ ವಾದಿರಾಜ ಶೆಟ್ಟಿ ಸದಾಶಿವ ಉಳ್ಳಾಲ, ದೇವಿಪ್ರಸಾದ್ ಶೆಟ್ಟಿ ಬೆಳಪು, ಭಾಸ್ಕರ ಕೋಟ್ಯಾನ್ ಉಪಸ್ಥಿತರಿದ್ದರು.

ನಿರ್ದೇಶಕ ಟಿ.ಜಿ. ರಾಜಾರಾಮ ಭಟ್ ಸ್ವಾಗತಿಸಿದರು. ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ) ರವೀಂದ್ರ ಬಿ. ವಂದಿಸಿದರು. ಗೋಪಿನಾಥ ಭಟ್ ಕಾರ್ಯಕ್ರಮ ನಿರೂಪಿಸಿದರು.

www.varthabharati.in
ಜನದನಿಯ ಸಾರಥಿ
epaper.varthabharati.in
ವಾರ್ತಾ ಭಾರತಿ
ಸತ್ಯ ಎಲ್ಲಡೆಗೆ
◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ
5 ಆಗಸ್ಟ್ 2018
ರವಿವಾರ
VARTHABHARATHI KANNADA DAILY
/Varthabharati
REGD.NO: MNG/958/2016-18 RNI NO. KAR KAN/2003/11378
ಸಂಪುಟ 15 ● ಸಂಚಿಕೆ 335 ● ಮಂಗಳೂರು

Best Price Guaranteed
FURNITURE MALL
UDUPI | MANGALORE | SHIMOGA

# ಪ್ರತಿಭಾ ಪುರಸ್ಕಾರ ಸಮಾರಂಭ

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನಿಂದ ನಗರದ ಕೊಡಿಯಾಲ್ ಬೈಲ್‌ನ ಬ್ಯಾಂಕ್‌ನ ಉತ್ಕೃಷ್ಟ ಸಹಕಾರಿ ಸೌಧದಲ್ಲಿ ಶನಿವಾರ ಮೊಳಹಳ್ಳಿ ಶಿವರಾಮ್ ಸ್ಮರಣಾರ್ಥ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಎಸೆಸೆಲ್ಸಿ ಹಾಗೂ ಪಿಯು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಬ್ಯಾಂಕ್ ಸಿಬ್ಬಂದಿ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರಕುಮಾರ್ ಮಾತನಾಡಿದರು.

ಸಹ್ಯಾದ್ರಿ ಕಾಲೇಜಿನ ಚೇರ್‌ಮನ್ ಡಾ.ಮಂಜುನಾಥ್ ಭಂಡಾರಿ ವಿದ್ಯಾರ್ಥಿಗಳನ್ನು ಪುರಸ್ಕರಿಸಿದರು. ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಉಪಾಧ್ಯಕ್ಷ ವಿನಯಕುಮಾರ್ ಸೂರಿಂಜೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ(ಪ್ರಭಾರ) ರವೀಂದ್ರ ಬಿ., ಬ್ಯಾಂಕ್‌ನ ನಿರ್ದೇಶಕರಾದ ಬಿ. ನಿರಂಜನ್, ಟಿ.ಜಿ.ರಾಜಾರಾವ್, ಭಾಸ್ಕರ್ ಎಸ್.ಕೋಟ್ಯಾನ್, ಶಶಿಕುಮಾರ್ ರೈ ಬಿ., ಎಸ್.ಬಿ.ಜಯರಾವ್, ಐಕಳಬಾವ ದೇವಿಪ್ರಸಾದ್ ಶೆಟ್ಟಿ, ಎಕ್ಸೈಡ್ ಲೈಫ್‌ನ ಜನರಲ್ ಮ್ಯಾನೇಜರ್ ಗಣೇಶ್ ಎಂ. ಮತ್ತಿತರರು ಉಪಸ್ಥಿತರಿದ್ದರು.

ಮುಂಜಾನೆ ಮಾತು
ಆಸೆ ಮತ್ತು ಅವಶ್ಯಕತೆಗಳ ನಿಜ ಅರ್ಥವನ್ನು ಗ್ರಹಿಸಿಕೊಂಡು ವ್ಯವಹರಿಸಿದರೆ ದುಃಖಕ್ಕೆ ಅವಕಾಶ ಇರುವುದಿಲ್ಲ. ಆಸೆಗಳನ್ನು ನಿಯಂತ್ರಿಸಿಕೊಂಡು ಅವಶ್ಯಕತೆಗಳನ್ನು ಪೂರೈಸಿಕೊಳ್ಳೋಣ.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ.1 ಕನ್ನಡ ದಿನಪತ್ರಿಕೆ

ಸದ್ದಿಲ್ಲದ ಶಾಲೆ

CENTRAL LIBRARY
ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 7 ● ಸಂಚಿಕೆ 127
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 5 ಆಗಸ್ಟ್ 2018 | ಭಾನುವಾರ

# ಕರಾವಳಿ ವಿದ್ಯಾರ್ಥಿಗಳಿಂದ ಸಂಶೋಧನೆ

## ಎಸ್‌ಸಿಡಿಸಿಸಿ ಬ್ಯಾಂಕ್ ಪ್ರತಿಭಾ ಪುರಸ್ಕಾರ ವಿತರಿಸಿ ಡಾ.ಮಂಜುನಾಥ ಭಂಡಾರಿ ಆಶಯ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಕರಾವಳಿಯ ವಿದ್ಯಾರ್ಥಿಗಳು ವೈದ್ಯಕೀಯ, ಇಂಜಿನಿಯರಿಂಗ್ ಕ್ಷೇತ್ರದ ಕಡೆಗೆ ಹೆಚ್ಚು ಆಸಕ್ತರಾಗಿದ್ದು, ಶಿಕ್ಷಣ, ಸಂಶೋಧನೆ, ನಾಗರಿಕ ಸೇವೆ ಮೊದಲಾದ ಕ್ಷೇತ್ರಗಳ ಕಡೆಗೂ ಗಮನ ವಹಿಸಬೇಕು ಎಂದು ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ವತಿಯಿಂದ ಶನಿವಾರ ಬ್ಯಾಂಕಿನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿವೇತನ ವಿತರಣಾ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಅವಿಭಜಿತ ದ. ಕ. ಜಿಲ್ಲೆಯಲ್ಲಿ ಪ್ರತಿಭಾವಂತರಿದ್ದಾರೆ. ಹಾಗಾಗಿ ಉನ್ನತ ಅವಕಾಶಗಳನ್ನು ಪಡೆಯುವುದು ಕಷ್ಟವಾಗಲಾರದು. ಬಡ ವರ್ಗದವರಿಗೂ ಸಾಕಷ್ಟು ಅವಕಾಶಗಳಿವೆ. ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

> ಬ್ಯಾಂಕುಗಳೆಂದರೆ ಸಾಲ ನೀಡುವುದು, ಸಾಲ ವಸೂಲಾತಿ, ಲಾಭ ಮಾಡುವುದಷ್ಟೇ ಉದ್ದೇಶವಾಗಿರಬಾರದು ಎಂಬ ನೆಲೆಯಲ್ಲಿ ಕಳೆದ 10 ವರ್ಷಗಳಿಂದ ಎಸ್‌ಸಿಡಿಸಿಸಿ ಬ್ಯಾಂಕಿನ ವತಿಯಿಂದ ಪ್ರತಿಭಾ ಪುರಸ್ಕಾರ ಆಯೋಜಿಸಲಾಗುತ್ತಿದೆ. ಸಾಧಕರನ್ನು ಪುರಸ್ಕರಿಸಿದಾಗ ಅವರಿಗೆ ಇನ್ನಷ್ಟು ಸಾಧನೆ ಮಾಡಲು ಪ್ರೇರಣೆಯಾಗುತ್ತದೆ.
>
> **ಡಾ.ಎಂ.ಎನ್.ರಾಜೇಂದ್ರ ಕುಮಾರ್**
> ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ



ವಿಜಯವಾಣಿ ಚಿತ್ರ

**ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ವತಿಯಿಂದ ಆಯೋಜಿಸಿದ ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿವೇತನ ವಿತರಣಾ ಸಮಾರಂಭದಲ್ಲಿ ಡಾ.ಮಂಜುನಾಥ ಭಂಡಾರಿ ಅವರನ್ನು ಗೌರವಿಸಲಾಯಿತು.**

ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ ಅಧ್ಯಕ್ಷತೆ ವಹಿಸಿದ್ದರು.

2017-18ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಬ್ಯಾಂಕಿನ ಸಿಬ್ಬಂದಿ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿವೇತನ ವಿತರಿಸಲಾಯಿತು. ಉಡುಪಿಯ ಸತ್ಯಶ್ರೀ ಹಾಗೂ ಆತಿಶ್ ಖಂಡಿಗ ಪುರಸ್ಕೃತರ ಪರವಾಗಿ ಮಾತನಾಡಿದರು. ಒಟ್ಟು 6 ಲಕ್ಷ ರೂ. ವೆಚ್ಚದ ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿವೇತನ ವಿತರಿಸಲಾಯಿತು. ಒಂದು ನಿಮಿಷದಲ್ಲಿ 19 ನಿರಾಲಂಬ ಪೂರ್ಣ ಚಕ್ರಾಸನ ಮಾಡಿ ಗಿನ್ನೆಸ್ ದಾಖಲೆಗೈದ ತನುಶ್ರೀ ಅವರಿಗೆ 25 ಸಾವಿರ ರೂ. ನೀಡಿ ಪುರಸ್ಕರಿಸಲಾಯಿತು. ಎಕ್ಸೈಡ್ ಲೈಫ್ ಇನ್ಶೂರೆನ್ಸ್‌ನಲ್ಲಿ ಸಾಧನೆ ಮಾಡಿದ ಪ್ರತಿನಿಧಿಗಳಿಗೆ ಸಂಸ್ಥೆಯ ಮ್ಯಾನೇಜರ್ ಗಣೇಶ್ ಬಹುಮಾನ ವಿತರಿಸಿದರು. ಬ್ಯಾಂಕಿನ ಉಪಾಧ್ಯಕ್ಷ ವಿನಯ ಕುಮಾರ್ ಸೂರಿಂಜೆ, ನಿರ್ದೇಶಕರಾದ ವಾದಿರಾಜ ಶೆಟ್ಟಿ, ಸದಾಶಿವ ಉಳ್ಳಾಲ್, ದೇವಿಪ್ರಸಾದ್ ಶೆಟ್ಟಿ ಬೆಳಪು, ಭಾಸ್ಕರ ಕೋಟ್ಯಾನ್ ಉಪಸ್ಥಿತರಿದ್ದರು.

ನಿರ್ದೇಶಕ ಟಿ.ಜಿ.ರಾಜಾರಾಮ ಭಟ್ ಸ್ವಾಗತಿಸಿದರು. ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವೀಂದ್ರ ಬಿ. ವಂದಿಸಿದರು. ಗೋಪಿನಾಥ ಭಟ್ ನಿರೂಪಿಸಿದರು.

ಮುಂಜಾನೆ ಮಾತು
ಆಸೆ ಮತ್ತು ಅವಶ್ಯಕತೆಗಳ ನಿಜ ಅರ್ಥವನ್ನು ಗ್ರಹಿಸಿಕೊಂಡು ವ್ಯವಹರಿಸಿದರೆ ದುಃಖಕ್ಕೆ ಅವಕಾಶ ಇರುವುದಿಲ್ಲ. ಆಸೆಗಳನ್ನು ನಿಯಂತ್ರಿಸಿಕೊಂಡು ಅವಶ್ಯಕತೆಗಳನ್ನು ಪೂರೈಸಿಕೊಳ್ಳೋಣ.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ.1 ಕನ್ನಡ ದಿನಪತ್ರಿಕೆ

ಸದ್ದಿಲ್ಲದ ಶಾಲೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 7 ● ಸಂಚಿಕೆ 127
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 5 ಆಗಸ್ಟ್ 2018 | ಭಾನುವಾರ

CENTRAL LIBRARY

# ಕೃತಿಚೌರ್ಯಕ್ಕೆ ಕಡಿವಾಣ!

## ಸಂಶೋಧನಾ ಗುಣಮಟ್ಟಕ್ಕೆ ಅಧಿಸೂಚನೆ ಪ್ರಕಟ

**ನವದೆಹಲಿ:** ಉನ್ನತ ಶಿಕ್ಷಣದ ಸಂಶೋಧನೆಯಲ್ಲಿ ಕೃತಿಚೌರ್ಯ ನಿಯಂತ್ರಿಸಲು ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ) ಕಠಿಣ ಕ್ರಮಕ್ಕೆ ಮುಂದಾಗಿದ್ದು, ನೋಂದಣಿ ರದ್ದು, ವೇತನ ಬಡ್ತಿ ಕಡಿತ ಮಾಡುವುದಾಗಿ ಅಧಿಸೂಚನೆ ಹೊರಡಿಸಿದೆ.

ಭಾರತೀಯ ವಿಶ್ವವಿದ್ಯಾಲಯಗಳಲ್ಲಿನ ಸಂಶೋಧನಾ ಗುಣಮಟ್ಟದ ಬಗ್ಗೆ ನಕಾರಾತ್ಮಕ ಚರ್ಚೆಗಳು ನಡೆಯುತ್ತಿರುವ ಕಾರಣ ಯುಜಿಸಿ ಈ ಕ್ರಮ ತೆಗೆದು ಕೊಂಡಿದೆ. ಆಗಸ್ಟ್ 3ರಿಂದಲೇ ಈ ಅಧಿಸೂಚನೆ ಜಾರಿಗೆ ಬರಲಿದೆ. ಮಾರ್ಚ್ 20ರಂದು ನಡೆದ ಯುಜಿಸಿ ಸಭೆಯಲ್ಲಿ ಈ ಸಂಬಂಧದ ನಿರ್ಣಯಕ್ಕೆ ಒಪ್ಪಿಗೆ ನೀಡಲಾಗಿತ್ತು.

ಯುಜಿಸಿ ರೂಪಿಸಿರುವ ನೂತನ ತಂತ್ರಾಂಶದ ಮೂಲಕ ಸಂಶೋಧನಾ ಪ್ರಬಂಧಗಳ ಕೃತಿಚೌರ್ಯದ ಪ್ರಮಾಣವನ್ನು ಗುರುತಿಸಲಾಗುತ್ತದೆ. ಹೀಗಾಗಿ ಯಾವುದೇ ಸಂಶೋಧನಾ ವಿದ್ಯಾರ್ಥಿಗಳು ಕೃತಿಚೌರ್ಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಈ ಹಿಂದೆ ಕೃತಿಚೌರ್ಯ ಮಾಡಿ ಉನ್ನತ ಹುದ್ದೆಯಲ್ಲಿರುವವರಿಗೆ ಇದು ಅನ್ವಯವಾಗುವುದಿಲ್ಲ.

ನಿಯಮ ಪ್ರಕಾರ, ಕೃತಿಚೌರ್ಯದಲ್ಲಿ ತೊಡಗಿರುವ ಸಂಶೋಧನಾ ವಿದ್ಯಾರ್ಥಿಗಳ ನೋಂದಣಿ ರದ್ದಾಗುತ್ತದೆ. ಅದೇ ಈಗಾಗಲೇ ಉದ್ಯೋಗದಲ್ಲಿರುವ ಉಪನ್ಯಾಸಕರು ಕೃತಿಚೌರ್ಯ ಮಾಡಿದರೆ 2 ವರ್ಷದವರೆಗೆ ವೇತನ ಬಡ್ತಿ ಹಾಗೂ 3 ವರ್ಷಗಳವರೆಗೆ ಸಂಶೋಧನಾ ಪದವಿಗಳ ಮೇಲ್ವಿಚಾರಕ ಜವಾಬ್ದಾರಿ ಕಳೆದುಕೊಳ್ಳಲಿದ್ದಾರೆ. ಕೃತಿಚೌರ್ಯಕ್ಕೆ ಮಾನದಂಡ ಇರಿಸಲಾಗಿದ್ದು, ಆ ಆಧಾರದ ಮೇಲೆ ಶಿಕ್ಷೆ ನೀಡಲಾಗುತ್ತದೆ. ಕೃತಿಚೌರ್ಯದ ಬಗ್ಗೆ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮೂರನೇ ವ್ಯಕ್ತಿ ಕೂಡ ದೂರು ನೀಡಲು ಅವಕಾಶ ನೀಡಲಾಗಿದೆ.

**ತರಬೇತಿ ಕಡ್ಡಾಯ:** ಸಂಶೋಧನಾ ಪದವಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಸಂಬಂಧ ಪಟ್ಟ ಉನ್ನತ ಶಿಕ್ಷಣ ಸಂಸ್ಥೆಯು ಕಡ್ಡಾಯವಾಗಿ ಕೃತಿಚೌರ್ಯ, ಸಂಶೋಧನೆಯ ಅಂತಾರಾಷ್ಟ್ರೀಯ ಗುಣಮಟ್ಟ, ಮಾರ್ಗ ಸೂಚಿ ಹಾಗೂ ನಿಯಮಗಳ ಬಗ್ಗೆ ಮಾಹಿತಿ ನೀಡಬೇಕು.

### ಯುಜಿಸಿಯಿಂದ ವಿಶೇಷ ತಂತ್ರಾಂಶ

ವಿಶೇಷ ತಂತ್ರಾಂಶ ರೂಪಿಸಲಾಗಿದ್ದು, ಇದರಿಂದ ಕೃತಿಚೌರ್ಯವನ್ನು ಕಂಪ್ಯೂಟರ್‌ನಲ್ಲೇ ಪರಿಶೀಲಿಸಬಹುದಾಗಿದೆ. ತಂತ್ರಾಂಶದಲ್ಲಿ ಹೇಳಿರುವಂತೆಯೇ ಮಾಹಿತಿಗಳನ್ನು ವಿದ್ಯಾರ್ಥಿಗಳು ಫೀಡ್ ಮಾಡಬೇಕಾಗುತ್ತದೆ. ಆ ಮಾಹಿತಿ ಆಧರಿಸಿ ಕೃತಿಚೌರ್ಯ ಕಂಡುಹಿಡಿಯಲಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಉಲ್ಲೇಖಿತ ಹೇಳಿಕೆ, ಕಾನೂನು, ಸಿದ್ಧಾಂತ, ಪ್ರಮೇಯ ಸೇರಿ ಇತರ ಅಧ್ಯಯನಕ್ಕೆ ಸಂಬಂಧಿಸಿದ ಸಾಮಾನ್ಯ ಅಂಶಗಳಿಗೆ ಕೃತಿಚೌರ್ಯದಿಂದ ವಿನಾಯಿತಿ ನೀಡಲಾಗಿದೆ.




### ನಿಯಂತ್ರಣಕ್ಕೆ ಕ್ರಮ

- ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ತಂತ್ರಜ್ಞಾನ ಆಧಾರಿತ ಕೃತಿ ಚೌರ್ಯ ತಡೆ ವ್ಯವಸ್ಥೆ ಜಾರಿ ಮಾಡಬೇಕು.
- ಈ ವ್ಯವಸ್ಥೆಯು ಸಾರ್ವಜನಿಕವಾಗಿ ಎಲ್ಲರಿಗೂ ಲಭ್ಯವಿರಬೇಕು, ಈ ಮೂಲಕ ಯಾವುದೆ ವಿದ್ಯಾರ್ಥಿಯು ಸುಲಭವಾಗಿ ಸಂಶೋಧನಾ ವಿಷಯಗಳ ಬಗ್ಗೆ ಮಾಹಿತಿ ಪಡೆಯಬಹುದು.
- ಪ್ರತಿ ಸಂಶೋಧನಾ ವಿದ್ಯಾರ್ಥಿಯು ಸಂಶೋಧನೆಯ ಮಾಹಿತಿ ಅಪ್ಲೋಡ್ ಮಾಡುವಾಗ ಕೃತಿಚೌರ್ಯ ಮಾಡಿಲ್ಲ ಎನ್ನುವ ಹಿಂಬರಹ ಬರೆದುಕೊಡಬೇಕು.
- ಈ ಹಿಂಬರಹದ ಜತೆಗೆ ಉನ್ನತ ಶಿಕ್ಷಣ ಸಂಸ್ಥೆಯು ಕೃತಿ ಚೌರ್ಯ ನಿಯಂತ್ರಣಕ್ಕೆ ರೂಪಿಸಿರುವ ವ್ಯವಸ್ಥೆಯ ಷರಾ ಅಗತ್ಯ.
- ಪ್ರತಿಯೊಬ್ಬ ಮೇಲ್ವಿಚಾರಕರು ಕೂಡ ಕೃತಿಚೌರ್ಯದ ಕುರಿತು ಸ್ಪಷ್ಟತೆ ಹೊಂದಿರ ಬೇಕು. ಹೀಗಾಗಿ ಅಧೀನದಲ್ಲಿರುವ ಸಂಶೋಧನಾ ವಿದ್ಯಾರ್ಥಿಗಳ ಪ್ರಬಂಧವು ಕೃತಿಚೌರ್ಯ ರಹಿತವಾಗಿದೆ ಎನ್ನುವುದನ್ನು ಖಾತ್ರಿಪಡಿಸ ಬೇಕು.
- ಉನ್ನತ ಶಿಕ್ಷಣ ಸಂಸ್ಥೆಗಳು ಸಂಶೋಧನಾ ಪದವಿಗೆ ಅನುಮತಿ ಕೊಟ್ಟ 1 ತಿಂಗಳೊಳಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲ ಯದ 'ಶೋಧ ಗಂಗಾ' ರಿಪೊಸಿಟರಿಗೆ ಪ್ರಬಂಧದ ಸಾಫ್ಟ್ ಕಾಪಿ ನೀಡಬೇಕು. ಅದನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿಯೂ ಪ್ರಕಟಿಸಬೇಕು.

### ಕೃತಿಚೌರ್ಯದ ಪ್ರಮಾಣ ಹಾಗೂ ಶಿಕ್ಷೆ

| ಪ್ರಮಾಣ(%) | ಶಿಕ್ಷೆ ಯಾರಿಗೆ, ಎಷ್ಟು? | |
|---|---|---|
| | ಸಂಶೋಧನಾ ವಿದ್ಯಾರ್ಥಿಗಳು | ಉದ್ಯೋಗ ನಿರತರು |
| 0-10 | ಯಾವುದೇ ಶಿಕ್ಷೆಯಿಲ್ಲ | ಯಾವುದೇ ಶಿಕ್ಷೆಯಿಲ್ಲ |
| 10-40 | ಪ್ರಬಂಧ ತಿರಸ್ಕರಿಸಿ 6 ತಿಂಗಳೊಳಗೆ ಮರುಸಲ್ಲಿಕೆ | ಪ್ರಬಂಧ ತಿರಸ್ಕರಿಸಿ 6 ತಿಂಗಳೊಳಗೆ ಮರುಸಲ್ಲಿಕೆ |
| 40-60 | 1 ವರ್ಷದವರೆಗೆ ಮರು ಪ್ರಬಂಧ ಸಲ್ಲಿಕೆಗೆ ನಿರ್ಬಂಧ | 1 ವರ್ಷದ ವೇತನ ಬಡ್ತಿ ರದ್ದು, 2 ವರ್ಷದವರೆಗೆ ಮೇಲ್ವಿಚಾರಕ ಜವಾಬ್ದಾರಿಯಿಲ್ಲ |
| 60ಕ್ಕಿಂತ ಹೆಚ್ಚು | ಪದವಿ ನೋಂದಣಿ ರದ್ದು | 2 ವರ್ಷದ ವೇತನ ಬಡ್ತಿ ರದ್ದು, 3 ವರ್ಷದವರೆಗೆ ಮೇಲ್ವಿಚಾರಕ ಜವಾಬ್ದಾರಿಯಿಲ್ಲ |

ವಿ.ಸೂ: ಒಂದೊಮ್ಮೆ ಶೇ.60ಕ್ಕಿಂತ ಹೆಚ್ಚಿನ ಕೃತಿಚೌರ್ಯವು ಎರಡನೇ ಬಾರಿಗೆ ನಡೆದರೆ [illegible]


₹ 5
ಸಂಪುಟ: 3 ಸಂಚಿಕೆ: 204 ಪುಟಗಳು: 12+6
05.08.2018 ಭಾನುವಾರ
ಬೆಂಗಳೂರು | ಹುಬ್ಬಳ್ಳಿ | ಮಂಗಳೂರು
ದಾವಣಗೆರೆ | ಕಲಬುರಗಿ | ಬೆಳಗಾವಿ
@vishwavaninews
vishwavanitimely
epaper.vishwavani.news
vishwavani.news
ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

# ವಿಶ್ವವಾಣಿ

ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ನೀವು ಕೆಲ ಕಾಲ ಬೇಸರದಲ್ಲಿದ್ದಾಗ ಶಾಶ್ವತವಾಗಿ ಬೇಸರವನ್ನುಂಟು ಮಾಡುವ ಕೆಲಸ ಮಾಡಬಾರದು. ಬೇಸರ ಕ್ಷಣಿಕ. ಅದನ್ನು ಅಷ್ಟೇ ಹಗುರವಾಗಿ, ಲಘುವಾಗಿ ನಿಭಾಯಿಸಬೇಕು.



ಪ್ರಧಾನಿ ವಿದೇಶ ಯಾತ್ರೆ ಹೋಗುವುದು ತಪ್ಪಲ್ಲ, ಹೋಗದಿರುವುದು!

ಇದೇ ಅಂತರಂಗ ಸುದ್ದಿ 6

# ಎಸ್‌ಸಿಡಿಸಿಸಿ ಬ್ಯಾಂಕ್‌ನಿಂದ ಪ್ರತಿಭಾ ಪುರಸ್ಕಾರ

**ವಿಶ್ವವಾಣಿ ಸುದ್ದಿಮನೆ** ಮಂಗಳೂರು

ಮೊಳಹಳ್ಳಿ ಶಿವರಾವ್ ಅವರ 138ನೇ ಜನ್ಮದಿನದ ಸ್ಮರಣಾರ್ಥ ದಕ್ಷಿಣ ಕನ್ನಡ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಶನಿವಾರ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಿತು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಬ್ಯಾಂಕ್‌ನ ಸಿಬ್ಬಂದಿ ಮಕ್ಕಳ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ, ನವೋದಯ ಸ್ವಸಹಾಯ ಸಂಘಗಳ ಪ್ರೇರಕರ ಮಕ್ಕಳಿಗೆ ಪ್ರೋತ್ಸಾಹ ಧನ ನೀಡಲಾಯಿತು.

ಪ್ರತಿಭಾ ಪುರಸ್ಕಾರ ನೆರವೇರಿಸಿ ಸಹ್ಯಾದ್ರಿ ತಾಂತ್ರಿಕ ಮಹಾ ವಿದ್ಯಾಲಯದ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಮಾತನಾಡಿ, ಮೊಳಹಳ್ಳಿ ಶಿವರಾವ್ ಭಾರತದ ಸಹಕಾರಿ ಪಿತಾಮಹ. ಅವರು ಸ್ಥಾಪಿಸಿದ ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಇಂದು ರಾಷ್ಟ್ರ ಮಟ್ಟದಲ್ಲಿ ಗುರುತಿಸಲ್ಪಟ್ಟಿದೆ. ಸಂಸ್ಥೆಯಿಂದ ಸಾವಿರಾರು ಕೃಷಿಕರು, ಸಾರ್ವಜನಿಕರಿಗೆ ಅನುಕೂಲವಾಗಿದೆ ಎಂದರು.

ಪ್ರತಿಭಾವಂತರು ಇಂದು ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣಕ್ಕೆ ಜೋತು ಬೀಳುತ್ತಿದ್ದಾರೆ. ಅದರ ಹೊರತಾಗಿ ನೂರಾರು ಅವಕಾಶಗಳಿವೆ. ಆ ಕಡೆಗೂ ನೋಡುವ ಅಗತ್ಯ ಇದೆ. ಆಡಳಿತ ಸೇವೆಯ ಪರೀಕ್ಷೆಗೆ ಹಾಜರಾಗಿ ಸಾಧನೆ ಮಾಡ ಬಹುದಾಗಿದೆ. ಸಂಶೋಧಕರಾಗ ಬಹುದಾಗಿದೆ ಎಂದರು.

ಬ್ಯಾಂಕ್‌ನ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರಕುಮಾರ್ ಮಾತನಾಡಿ, ಬ್ಯಾಂಕ್‌ಗಳು ಸಾಲ ನೀಡುವುದು, ವಸೂಲು ಮಾಡುವುದು ಮತ್ತು ತಮ್ಮ ಅಭಿವೃದ್ಧಿಯ ಬಗ್ಗೆ ಮಾತ್ರ ಯೋಚಿಸಿದರೆ ಸಾಲದು. ಅವುಗಳು ವಿವಿಧ ಕ್ಷೇತ್ರಗಳ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಮಾಡಬೇಕು. ಆಗ ಇನ್ನು ಹೆಚ್ಚಿನ ಸಾಧನೆ ಮಾಡಲು ಪ್ರೇರಣೆ ಆಗಬಲ್ಲುದು ಎಂದರು.

ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ಆಡಳಿತ ಸೇವೆ ಮತ್ತು ಇನ್ನಿತರ ಉನ್ನತ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೂ ಬ್ಯಾಂಕು ಪ್ರೋತ್ಸಾಹ ನೀಡಲಿದೆ ಎಂದು ರಾಜೇಂದ್ರಕುಮಾರ್ ನುಡಿದರು. ಇದೇ ಸಂದರ್ಭದಲ್ಲಿ ನಿರಾಲಂಭ ಪೂರ್ಣ ಚಕ್ರಾಸನದಲ್ಲಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ಮಾಡಿದ ಪಿತ್ರೋಡಿಯ ತನುಶ್ರೀ ಅವರನ್ನು ಗೌರವಿಸಿ 25,000 ರು. ಪುರಸ್ಕಾರ ನೀಡಲಾಯಿತು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ವಿನಯಕುಮಾರ್ ಸೂರಿಂಜೆ, ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಹರೀಶ್ ಆಚಾರ್, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಸದಾಶಿವ ಉಳ್ಳಾಲ, ವಾದಿರಾಜ ಶೆಟ್ಟಿ, ದೇವಿಪ್ರಸಾದ್ ಶೆಟ್ಟಿ, ಭಾಸ್ಕರ ಕೋಟ್ಯಾನ್, ಎಕ್ಸೈಡ್ ಲೈಫ್ ಇನ್ಶೂರೆನ್ಸ್‌ನ ಮಹಾ ಪ್ರಬಂಧಕ ಗಣೇಶ್ ಎಂ., ಡಿಸಿಸಿ ಬ್ಯಾಂಕಿನ ನಿರ್ದೇಶಕ ಟಿ.ಜಿ.ರಾಜಾರಾಂ ಭಟ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವೀಂದ್ರ ಬೋಳಾರ್, ಗೋಪಿನಾಥ್ ಭಟ್ ಇದ್ದರು.



ಮೊಳಹಳ್ಳಿ ಶಿವರಾವ್ ಅವರ 138ನೇ ಜನ್ಮದಿನದ ಸ್ಮರಣಾರ್ಥವಾಗಿ ದಕ್ಷಿಣ ಕನ್ನಡ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಪ್ರತಿಭಾ ಪುರಸ್ಕಾರ ನಡೆಯಿತು.

Ig. No: 2
CENTRAL LIBRARY
Adyar, Mangalore-7

ಭಾನುವಾರ,5 ಆಗಸ್ಟ್ 2018 | ಪುಟಗಳು: 10+4+4 | ಬೆಲೆ: ₹ 5.00
www.vijaykarnataka.com
ಸಂಪುಟ: 18 | ಸಂಚಿಕೆ: 10
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ



2019ರ ಚುನಾವಣೆ: ಪ್ರತಿಪಕ್ಷ ಪಾಳಯದಲ್ಲಿ ಮೋದಿ ಎದುರಿಸುವ ನಾಯಕತ್ವವೇ ಇಲ್ಲ! P01



1000ನೇ ಟೆಸ್ಟನ್ನು ಗೆದ್ದು ಐತಿಹಾಸಿಕ ಸಾಧನೆ ಮಾಡಿದ ಇಂಗ್ಲೆಂಡ್: ಭಾರತ ತಂಡಕ್ಕೆ 31 ರನ್ ಸೋಲು P07

ಭಾರತಕ್ಕೆ ವ್ಯೂಹಾತ್ಮಕ ವ್ಯಾಪಾರ ಅಧಿಕಾರ-1 ಸ್ಥಾನ ನೀಡಿದ ಅಮೆರಿಕ: ಎನ್ಎಸ್‌ಜಿ ಹಾದಿ ಸುಗಮ?

# ಬ್ಯಾಂಕ್‌ಗಳು ಪ್ರತಿಭೆಗಳನ್ನು ಪ್ರೋತ್ಸಾಹಿಸಲಿ: ಎಂಎನ್‌ಆರ್

## ಎಸ್‌ಸಿಡಿಸಿಸಿ ಬ್ಯಾಂಕ್‌ನಿಂದ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣೆ



**ವಿಕ ಸುದ್ದಿಲೋಕ** ಮಂಗಳೂರು

ಬ್ಯಾಂಕ್ ಬರೀ ಗ್ರಾಹಕರಿಗೆ ಸಾಲ ನೀಡುವುದು, ಅದನ್ನು ವಸೂಲು ಮಾಡುವುದು, ಲಾಭ ನಷ್ಟದ ಲೆಕ್ಕಾಚಾರದಲ್ಲಿ ತೊಡಗಿಕೊಳ್ಳುವ ಜತೆಗೆ ಸಮಾಜದಲ್ಲಿರುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ಕೆಲಸವನ್ನು ಮಾಡಬೇಕು ಎಂದು ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್.ರಾಜೇಂದ್ರ ಕುಮಾರ್ ಹೇಳಿದರು.

ಶನಿವಾರ ನಗರದ ಕೊಡಿಯಾಲ್‌ಬೈಲ್‌ನಲ್ಲಿರುವ ಎಸ್‌ಸಿಡಿಸಿಸಿ ಬ್ಯಾಂಕ್‌ನ ಉತ್ಕೃಷ್ಟ ಸಹಕಾರಿ ಸೌಧದ ಮೊಳಹಳ್ಳಿ ಶಿವರಾವ್ ಸಭಾಂಗಣದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಬ್ಯಾಂಕ್‌ನ ವತಿಯಿಂದ ಸಹಕಾರಿ ಪಿತಾಮಹ ಮೊಳಹಳ್ಳಿ ಶಿವರಾವ್ ಅವರ ಸ್ಮರಣಾರ್ಥವಾಗಿ ನಡೆದ ಪ್ರತಿಭಾ ಪುರಸ್ಕಾರ ಹಾಗೂ ಬ್ಯಾಂಕ್‌ನ ಸಿಬ್ಬಂದಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಿಸುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಪ್ರತಿಭೆಗಳನ್ನು ಗುರುತಿಸುವ ಮೂಲಕ ಅವರ ಸಾಧನೆಗೆ ಬೆನ್ನು ತಟ್ಟುವ ಕಾರ್ಯ ಮಾಡುವ ಜತೆಗೆ ಅವರಿಗೂ ಮತ್ತಷ್ಟು ಸಾಧನೆ ಮಾಡುವ ಉಮೇದು ಬಂದು ಬಿಡುತ್ತದೆ. ಕ್ಲರ್ಕ್‌ನ ಪುತ್ರ ಕ್ಲರ್ಕ್ ಆಗಿ ಬದುಕಬಾರದು. ದ.ಕ. ಜಿಲ್ಲೆ ಬುದ್ಧಿವಂತರ ಜಿಲ್ಲೆ, ಆದರೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗವಹಿಸುವ ಮಂದಿ ಬಹಳ ಕಡಿಮೆ. ಇಲ್ಲಿನ ವಿದ್ಯಾರ್ಥಿಗಳಿಗೆ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕ್ಷೇತ್ರ ಮಾತ್ರ ಇಷ್ಟವಾಗುತ್ತಿದೆ. ಅದನ್ನು ಬಿಟ್ಟು ಇತರ ಕ್ಷೇತ್ರದಲ್ಲೂ ಸಾಧಿಸುವ ಕೆಲಸ ನಡೆಯಬೇಕು ಎಂದರು.

ಅಡ್ಯಾರ್‌ನಲ್ಲಿರುವ ಸಹ್ಯಾದ್ರಿ ಕಾಲೇಜು ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನ ಚೇರ್ ಮನ್ ಡಾ. ಮಂಜುನಾಥ ಭಂಡಾರಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಿ ಮಾತನಾಡಿ, ಮೊಳಹಳ್ಳಿ ಶಿವರಾವ್ ಅವರಿಂದಾಗಿ ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ಉತ್ತಮ ಬದಲಾವಣೆಯಾಗಿದೆ. ಈ ಹಿಂದೆ ರೈತರು ಸಾಲ ಪಡೆದುಕೊಳ್ಳುವುದು ಅಷ್ಟೊಂದು ಸುಲಭದ ಮಾತಲ್ಲ, ಈಗ ಎಲ್ಲವೂ ಸುಲಭ, ಸರಳವಾಗಿ ಬಿಟ್ಟಿದೆ. ಮೊಳಹಳ್ಳಿ ಅವರು ಲಕ್ಷಾಂತರ ರೈತರ ಕುಟುಂಬಕ್ಕೆ ದಾರಿ ದೀಪವಾಗಿದ್ದಾರೆ ಎಂದರು.

ಡಾ. ರಾಜೇಂದ್ರ ಕುಮಾರ್ ಅವರು ತಮ್ಮ ಬ್ಯಾಂಕ್‌ನ ಸಿಬ್ಬಂದಿಗಳ ಮಕ್ಕಳಿಗೆ ಪ್ರೋತ್ಸಾಹದ ಜತೆಗೆ ವಿದ್ಯಾರ್ಥಿ ವೇತನವನ್ನು ನೀಡುವ ಮೂಲಕ ಗುರುತಿಸುವ ಕೆಲಸ ಮಾಡಿದ್ದಾರೆ. ಇದು ಉತ್ತಮ ಸಮಾಜದ ಬೆಳವಣಿಗೆಯಲ್ಲಿ ಒಂದಾಗಿದೆ. ಭಾಷಣದಲ್ಲಿ ಯಾರು ಬೇಕಾದರೂ ಹೇಳಬಹುದು. ಆದರೆ ನಿಜವಾಗಿ ಕೈ ಜೋಡಿಸುವ ಕೆಲಸ ಮಾಡಬೇಕು ಎಂದರು.

ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ವಿಶೇಷ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಹಾಗೂ ಮೂವರು ವಿಶೇಷ ಚೇತನ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಸಿಬ್ಬಂದಿಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಗೌರವಿಸಲಾಯಿತು. ಈ ಬಳಿಕ ಯೋಗದಲ್ಲಿ ಗಿನ್ನಿಸ್ ದಾಖಲೆ ಹಾಗೂ ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲಾದ ತನುಶ್ರೀ ಪಿತ್ರೋಡಿ ಅವರಿಗೆ ಎಸ್‌ಸಿಡಿಸಿಸಿ ಬ್ಯಾಂಕ್ ವತಿಯಿಂದ 25 ಸಾವಿರ ರೂ. ಹಾಗೂ ಫಲಪುಷ್ಪ ನೀಡಿ ಸನ್ಮಾನಿಸಲಾಯಿತು.

ದ.ಕ. ಜಿಲ್ಲಾ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಹರೀಶ್ ಆಚಾರ್ಯ, ಬ್ಯಾಂಕಿನ ಉಪಾಧ್ಯಕ್ಷ ವಿನಯ ಕುಮಾರ್ ಸೂರಿಂಜೆ, ಬ್ಯಾಂಕ್‌ನ ನಿರ್ದೇಶಕರಾದ ಬಿ. ನಿರಂಜನ್, ಟಿ.ಜಿ.ರಾಜಾರಾಮ್ ಭಟ್, ಭಾಸ್ಕರ ಎಸ್ ಕೋಟ್ಯಾನ್, ಬಿ.ರಘುರಾಮ್ ಶೆಟ್ಟಿ, ಎಂ. ವಾದಿರಾಜ ಶೆಟ್ಟಿ, ಕೆ.ಎಸ್. ದೇವರಾಜ್, ಸದಾಶಿವ ಉಳ್ಳಾಲ್, ಎಸ್.ರಾಜು ಪೂಜಾರಿ, ಶಶಿಕುಮಾರ್ ರೈ ಬಿ, ರಾಜೇಶ್ ರಾವ್, ಎಸ್.ಬಿ. ಜಯರಾಮ ರೈ, ಐಕಳಬಾವ ದೇವಿಪ್ರಸಾದ್ ಶೆಟ್ಟಿ, ರಮೇಶ್ ಶೆಟ್ಟಿ ಎನ್ ಮತ್ತಿತರರು ಉಪಸ್ಥಿತರಿದ್ದರು. ಗೋಪಿನಾಥ್ ಭಟ್ ಕಾರ್ಯಕ್ರಮ ನಿರೂಪಿಸಿದರು. ಬ್ಯಾಂಕ್‌ನ ಸಿಇಒ ರವೀಂದ್ರ ಬಿ ವಂದಿಸಿದರು.

ಕರ್ನಾಟಕ ಸರ್ಕಾರ
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯುತ್ತ ಸಂಸ್ಥೆ)
ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು - 560002. ದೂರವಾಣಿ : 26700810,
ಟೆಲಿ ಫ್ಯಾಕ್ಸ್ : 26704342, ಇಮೇಲ್: director_bmcri@yahoo.co. in
ಸಂಖ್ಯೆ: ಬೆಂವೈವಿಸಂಸಂ/ಸರಬ(2)/07/2017-18 ದಿನಾಂಕ: 04/08/2018.
ಇ-ಟೆಂಡರ್ ಅಧಿಸೂಚನೆ
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಪ್ರಾದೇಶಿಕ ಜೆರೀಯಾಟ್ರಿಕ್ ಕೇಂದ್ರಕ್ಕೆ ಅಗತ್ಯವಿರುವ ವೈದಕೀಯ ಉಪಕರಣಗಳ ಖರೀದಿಗಾಗಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂ, ಇ.ಎಂ.ಡಿ ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು https://www.eproc.karnataka.gov.in ಈ ವೆಬ್ ಸೈಟಿನಲ್ಲಿ ವೀಕ್ಷಿಸಿ, ಟೆಂಡರುಗಳನ್ನು ಸಲ್ಲಿಸಬಹುದು. ಆಸಕ್ತಿಯುಳ್ಳ ಟೆಂಡರುದಾರರು e-procurementportalನಲ್ಲಿ ನೊಂದಾಯಿಸತಕ್ಕದ್ದು. ನೋಂದಾವಣೆಗೆ ಅಗತ್ಯವಾದ ವಿವರಗಳನ್ನು ವೆಬ್ ಸೈಟಿನಲ್ಲಿ ನೋಡಬಹುದು.
ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭ ದಿನಾಂಕ : 08/08/2018
ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಅಂತಿಮ ದಿನಾಂಕ : 07/09/2018 ಅಪರಾಹ್ನ 4.30ಕ್ಕೂ ಮುಂಚಿತವಾಗಿ
ಟೆಂಡರ್‌ಗಳನ್ನು ತೆರೆಯುವ ದಿನಾಂಕ : 10/09/2018 ಪೂರ್ವಾಹ್ನ 10.30ಕ್ಕೆ
ಹೆಚ್ಚಿನ ವಿವರಗಳಿಗಾಗಿ ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ